ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ
ಕನ್ನಡ ಕಣ್ಣಾಗದೆ ಕನ್ನಡಕ ಆಗಿದೆ?



ಪರಭಾಷೆಯ ಎರಚಲಿಂದ ಮಾತೃಭಾಷೆಯ ಪರದೆ ಮಂಜಾಗಿದೆ.

ವಿದ್ಯಾ ಎನ್. ಪೈ, ಹೊನ್ನಾವರ
ಕನ್ನಡನಾಡಿನಲ್ಲಿ 'ಕನ್ನಡ ಉಳಿಸಿ' ಎಂಬ ಪರಿಸ್ಥಿತಿ ಏಕೆ ಬಂದಿದೆ?
ಮಾಧ್ಯಮಗಳೇ ಭಾಷೆಗೆ ಯಮ ಆಗುತ್ತಿರುವುದರಿಂದ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಮನುಷ್ಯರ ಯಾವುದೇ ಭಾಗಕ್ಕೆ ಹೋಲಿಸಿದರೂ ಬೆನ್ನಿನಲ್ಲೇ ಹೆಚ್ಚು ತುರಿಕೆಯಾಗಲು ಕಾರಣ?
ಸದಾ ಅಲಕ್ಷಿಸಲಾಗುವ ಬೆನ್ನಿಗೆ ಗಮನ ಸೆಳೆಯಲು ಉಳಿದಿರುವುದು ಅದೊಂದೇ ವಿಧ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ಅತ್ತೆ ಸೊಸೆ ಜಗಳ ಆಡುವಂತೆ ಮಾವ ಅಳಿಯ ಜಗಳ ಆಡುವುದಿಲ್ಲವೇಕೆ?



ಅಂಪೈರ್‌ಗಳಿಗೆ ಪಂದ್ಯದಲ್ಲಿ ಆಡಲು ಅವಕಾಶ ಇರುವುದಿಲ್ಲ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ನಾಗರಿಕತೆಯ ಮುಂದಿನ ನಡೆ ಹೇಗಿರಬಹುದು ರಾಮ್?
ಒಲಿಂಪಿಕ್ಸ್‌ನ ಆಬ್‌ಸ್ಟೆಕಲ್ ರೇಸ್‌ನಂತೆ.

ಬಿ.ಚಂದ್ರೇಗೌಡ, ಬೆಂಗಳೂರು
ವಿಜ್ಞಾನದಲ್ಲಿ ಕಲೆಯನ್ನೂ ಕಲೆಯಲ್ಲಿ ವಿಜ್ಞಾನವನ್ನೂ ಹುಡುಕುವ ಬಗೆ ಹೇಗೆ?
ಲ್ಯಾಬಿನ ನೆಲದಲ್ಲಿ ವಿಜ್ಞಾನದ (ಕೆಮಿಕಲ್‌ನ) ಕಲೆ; ಶಿಲ್ಪಕಲೆಯಲ್ಲಿ ಗೋಲ್ಡನ್ ರೇಶ್ಯುವಿನ ವಿಜ್ಞಾನ!

ಕೆ.ವಿ. ಗೋವಿಂದಾಚಾರಿ, ಮೈಸೂರು
ಬಾಗಿಲಿಗೆ ಬಂದವನಿಗೆ ಭಿಕ್ಷೆ ನೀಡದೆ ದೇವಸ್ಥಾನದ ಹುಂಡಿಗೆ ಹಣ ಹಾಕುವರಲ್ಲ?
ಹುಂಡಿಗೆ ಹಾಕಿದ ಹಣ ಸ್ವರ್ಗದಲ್ಲಿ ಸೀಟ್ ಬುಕ್ ಮಾಡಿಸುತ್ತಂತಲ್ಲ.

ರಾಜು ಎಸ್. ಗಾಲಿ, ಅಥಣಿ
ನಮ್ಮ ರಾಜ್ಯದ ಮೂರೂ ಪಕ್ಷಗಳ ನಾಯಕರು ಎಲೆಕ್ಷನ್ ಬಂದಾಗ ಕೆಸರಾಟ ಆಡುವುದೇಕೆ?
ಸಹಜವಲ್ಲವೇ – ಕೋಣಗಳಿಗೆ ಕೆಸರೆಂದರೆ ಅಚ್ಚುಮೆಚ್ಚು.

ರಾಜಶೇಖರ ಹಾದಿಮನಿ, ಧಾರವಾಡ
ಹಿರಿಯರು ತಮ್ಮ ಕರ್ತವ್ಯ ಪೂರೈಸದೆ ಹೋದರೆ ಮುಂದಿನ ಪೀಳಿಗೆ ಅತಂತ್ರವಲ್ಲವೆ ರಾಮ್?
ಆಹಾ! ದೇಶದ ಎಪ್ಪತ್ತೈದು ವರ್ಷಗಳ ಹಣೆಬರಹವನ್ನು ಒಂದೇ ಸಾಲಲ್ಲಿ ಹೇಳಿದಿರಿ.

ಮುರಲೀಧರ ಕುಲಕರ್ಣಿ, ಬೀದರ್
ವಿವಾಹಿತ ಮಹಿಳೆಯನ್ನು ಮಂಗಳಸೂತ್ರದಿಂದ ಗುರುತಿಸಬಹುದು. ವಿವಾಹಿತ ಪುರುಷನನ್ನು?
ಮುಖವನ್ನು ಪರೀಕ್ಷಿಸಿ ಆತ್ಮವಿಶ್ವಾಸ ಕಂಡರೆ ಅವಿವಾಹಿತ; ವಿಧೇಯತೆ ಕಂಡರೆ ವಿವಾಹಿತ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ದೇವಾನುದೇವತೆಗಳೆಲ್ಲ ಹಸಿದೇ ಇರುತ್ತಾರಲ್ಲ, ಏಕೆ?
ಹೊಟ್ಟೆ ತುಂಬಿದರೆ ನಿದ್ರೆ ಆವರಿಸಿ ವರ್ಲ್ಡ್ ಮ್ಯಾನೇಜ್‌ಮೆಂಟ್ ಕಷ್ಟವಾಗುವುದೆಂದು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಕುರಿಗಳಿಗೂ ಒಂದು ನಿರ್ದಿಷ್ಟ ಗುರಿ ಇರುತ್ತದೆಯೆ?
'ಹೂಂ. ಮೀಸಲಾತಿ, ಸವಲತ್ತು, ಬಿಟ್ಟಿಭಾಗ್ಯ' ಎಂದಿತೊಂದು ಡೆಮಾಕ್ರೆಸಿ ಕುರಿ.

ಅನಸೂಯ ಟಿ, ಕೇದಿಗೆಮನೆ
ನನ್ನ ತೊಂಬತ್ತರ ಹರೆಯದ ಅತ್ತೆಗೂ 'ಯೂ ಟ್ಯೂಬ್' ಗೀಳು ಹಿಡಿದಿದೆಯಲ್ಲ?
ಭೇಷ್! 'ಯೂ ಟ್ಯೂಬ್‌ಲೈಟ್!' ಎಂದು ಹರಿಹಾಯುವುದಕ್ಕಿಂತ ಇದು ಉತ್ತಮ.

## ವಾರದ ಪ್ರಶ್ನೆ

ಹೆಚ್.ವಿ. ಶ್ರೀಧರ್, ಬೆಂಗಳೂರು
ಗಣ್ಯರು ಗತಿಸಿದಾಗ 'ತುಂಬಲಾರದ ನಷ್ಟ' ಎನ್ನುವರು ಬದುಕಿದ್ದಾಗ 'ತುಂಬಿಕೊಳ್ಳಬಹುದಾದ ಲಾಭ' ಎನ್ನರೇಕೆ?
ಏಕೆಂದರೆ ಆಗಲೂ ಲಾಭವನ್ನೆಲ್ಲ ಆ ಗಣ್ಯರೇ ತುಂಬಿಕೊಂಡುಬಿಟ್ಟಿರುತ್ತಾರೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಈ ಜನ್ಮದ ಒಳಗುಟ್ಟೇನು ಸರ್?
ಇನ್ನೊಂದು ಜನ್ಮ ಎತ್ತದಂತೆ ಜೀವಿಸುವುದು.

ಶರತ್ ಎಸ್. ಬೆಂಗಳೂರು
ಅಕ್ಷಯ ತೃತೀಯ: ಏನಿದರ ಅರ್ಥ?
ಜನರ ಮೌಢ್ಯಭರಿತ ಲೋಹಮೋಹದಿಂದ ತೃತೀಯನ (ಚಿನ್ನದವನ) ಲಾಭ ಅಕ್ಷಯವೆಂದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ನದಿಗೂ, ಬಾವಿಗೂ ಏನು ವ್ಯತ್ಯಾಸ?



ನದಿ ಅಧೋಮುಖಿ; ಬಾವಿ ಊರ್ಧ್ವಮುಖಿ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ನೆರಳಿಗೆ ಆಯುಷ್ಯ ಎಷ್ಟಿದೆ?
ಅತ್ತಕಡೆ ಇರುವ ಬೆಳಕಿನಷ್ಟೇ.

ಮಹಾವೀರ ಕಾಸರ, ಶಿವಮೊಗ್ಗ
ಕುಡುಕರು ಸರ್ಕಾರವನ್ನೇ ನಡೆಸುತ್ತಿರುವಾಗ ಅವರು ಕಾರು, ಬೈಕು ನಡೆಸಲು ನಿರ್ಬಂಧವೇಕೆ?
ಸರ್ಕಾರಗಳು ನಡೆಯುತ್ತಿರುವ ರೀತಿಯನ್ನು ಕಂಡೂ ಹೀಗೆ ಕೇಳುವುದೇ... ಅಕಟಕಟಾ!

ಸಿಂಗಾರ್ ಪುಟ್ಟಣ್ಣ, ಕಣಗಾಲು
ಶಿಸ್ತಿನ ಸಿಪಾಯಿಯ ಟೋಪಿ ಏಕೆ ಸೊಟ್ಟಗಿರುತ್ತದೆ?
ಡೊಂಕುಸಲಾಮು ಹೊಡೆದೂ ಹೊಡೆದೂ.

■ ರಾಮ್